## ಆದೇಶ

ಅರ್ಜಿದಾರರು ಮೃತ ಶ್ರೀಮತಿ.ಕಾಳಮ್ಮ ಕೋಂ ಲೇಟ್ ದೇವಶೆಟ್ಟಿ ರವರ ಮರಣ ದಿನಾಂಕವನ್ನು ದಾಖಲು ಮಾಡಲು ಹಾಗು ಮರಣ ಪ್ರಮಾಣ ಪತ್ರ ನೀಡುವಂತೆ ನಿರ್ದೇಶನ ಕೋರಿ ಎದುರುದಾರರ ವಿರುದ್ಧ ಜನನ ಮತ್ತು ಮರಣ ನೋಂದಣಿ ಕಾಯಿದೆ ಕಲಂ 1969 ರ ಕಲಂ 13 ರಡಿಯಲ್ಲಿ ಈ ಅರ್ಜಿ ಸಲ್ಲಿಸಿರುತ್ತಾರೆ.

2. **ಅರ್ಜಿದಾರರ ಅರ್ಜಿಯ ಸಂಕ್ಷಿಪ್ತ ಸಾರಾಂಶವೇನೆಂದರೆಃ-**

ಶ್ರೀಮತಿ.ಕಾಳಮ್ಮ ಕೋಂ ಲೇಟ್ ದೇವಶೆಟ್ಟಿ ಇವರು ದಿನಾಂಕಃ 15.06.2017 ರಂದು, ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಚಿಕ್ಕಯ್ಯನಛತ್ರ ಹೋಬಳಿ, ಅಹಲ್ಯಾ ಗ್ರಾಮದಲ್ಲಿರುವ ನಿವಾಸದಲ್ಲಿ ಮರಣ ಹೊಂದಿದ್ದು, ಸದರಿ ವಿಚಾರವನ್ನು ಸೂಕ್ತ ಸಮಯದಲ್ಲಿ ಎದುರುದಾರರ ಕಛೇರಿ ಪುಸ್ತಕದಲ್ಲಿ ನಮೂದು ಮಾಡಲು ತಿಳಿಸಿರುವುದಿಲ್ಲ ಹಾಗು ಕಾರಣಾಂತರಗಳಿಂದ ನಿಗಧಿತ ಸಮಯದಲ್ಲಿ ಸದರಿಯವರ ಮರಣದ ದಿನಾಂಕವನ್ನು ಎದುರುದಾರರ ಕಛೇರಿಯಲ್ಲಿ ನೋಂದಣಿ ಮಾಡಲು ಸಾಧ್ಯವಾಗಿರುವುದಿಲ್ಲ, ಆದರೂ ಸಹಿತ ಎದುರುದಾರರ ಇಲಾಖೆಗೆ ಮಾಹಿತಿ ನೀಡಿದ್ದು, ಅದರ ಆಧಾರದ ಮೇಲೆ ಎದುರುದಾರರ ಇಲಾಖಾ ವತಿಯಿಂದ ಸದರಿ ನೋಂದಣಿಯನ್ನು ಮಾಡಿರಬಹುದು ಎಂಬ ವಿಶ್ವಾಸದಲ್ಲಿರುತ್ತಾರೆ. ಹೀಗಿರುವಾಗ ಅರ್ಜಿದಾರರು ಎದುರುದಾರರ ಕಛೇರಿಗೆ ಹೋಗಿ ಮರಣ ನೋಂದಣಿ ಪ್ರಮಾಣ ಪತ್ರದ ಬಗ್ಗೆ ವಿಚಾರಿಸಿದಾಗ ಎದುರುದಾರರ ಕಛೇರಿಯವರು ಮೃತ ಶ್ರೀಮತಿ.ಕಾಳಮ್ಮ ಕೋಂ ಲೇಟ್ ದೇವಶೆಟ್ಟಿ ರವರ ಹೆಸರು ನೋಂದಾವಣಿ ಆಗಿಲ್ಲವೆಂದು ಮತ್ತು ಈ ರೀತಿಯಾಗಿ ತಮಗೆ ಪ್ರಮಾಣ ಪತ್ರ ನೀಡಲು ಬರುವುದಿಲ್ಲವೆಂದು ಹಿಂಬರಹವನ್ನು ಕೊಟ್ಟಿರುತ್ತಾರೆ. ಮುಂದುವರಿದು ಅರ್ಜಿದಾರರು ಹೇಳುವುದೇನೆಂದರೆ, ಸದರಿ ಪ್ರಮಾಣ ಪತ್ರವು ಖಾತೆ ಬದಲಾವಣೆ

ಮಾಡಿಸಲು ಅವಶ್ಯಕತೆ ಇರುವುದರಿಂದ ಸಂಬಂಧಪಟ್ಟ ಇಲಾಖೆಗೆ ಸೂಕ್ತ ಆದೇಶ ಹೊರಡಿಸಬೇಕು ಹಾಗು ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಂಡಿರುತ್ತಾರೆ.

3. ಅರ್ಜಿಯನ್ನು ದಾಖಲಿಸಿದ ನಂತರ ಎದುರುದಾರರಿಗೆ ನೋಟಿಸ್ ಜಾರಿಯಾಗಿದ್ದರೂ ಕೂಡ ಎದುರುದಾರರು ಗೈರುಹಾಜರಾಗಿರುತ್ತಾರೆ ಮತ್ತು ಯಾವುದೇ ತಕರಾರು, ವಗೈರೆ ಸಲ್ಲಿಸಿರುವುದಿಲ್ಲ.

4. ಅರ್ಜಿದಾರರು ತಮ್ಮ ಪ್ರಕರಣವನ್ನು ರುಜುವಾತುಪಡಿಸುವ ಸಲುವಾಗಿ ಅರ್ಜಿದಾರರ ಪೈಕಿ 1 ನೇ ಅರ್ಜಿದಾರರು ತನ್ನನ್ನು ಅಸಾ-1 ಎಂದು ವಿಚಾರಣೆಗೊಳಪಡಿಸಿಕೊಂಡು ನಿಪಿ-1 ರಿಂದ ನಿಪಿ-4 ರವರೆಗೆ ದಾಖಲೆಗಳನ್ನು ಹಾಜರುಪಡಿಸಿದ್ದಾರೆ.

5. ಅರ್ಜಿದಾರರ ವಾದವನ್ನು ಆಲಿಸಲಾಯಿತು ಮತ್ತು ಲಭ್ಯವಿದ್ದ ದಾಖಲೆಗಳನ್ನು ಪರಿಶೀಲಿಸಲಾಯಿತು.

6. ಈ ಕೆಳಗಿನ ಅಂಶಗಳು ನ್ಯಾಯಾಲಯದ ಅವಗಾಹನೆಗೆ ಬಂದಿರುತ್ತವೆ.

1. **ಅರ್ಜಿದಾರರು ತಮ್ಮ ಅರ್ಜಿಯನ್ನು ಪುರಸ್ಕರಿಸಲು ಸೂಕ್ತ ಕಾರಣಗಳನ್ನು ನೀಡಿರುವರೇ?**
2. **ಏನು ಆದೇಶ?**

7. ಈ ಮೇಲಿನ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಃ-

ಅಂಶ -1 : **ಸಕಾರಾತ್ಮಕವಾಗಿ**

ಅಂಶ -2 : ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ:-

**ಕಾರಣಗಳು**

8. **ಅಂಶ-1:-** ಈ ಪ್ರಕರಣದ 1 ನೇ ಅರ್ಜಿದಾರರು ಅಸಾ-1 ಎಂಬುದಾಗಿ ವಿಚಾರಣೆಗೊಳಪಟ್ಟು, ತಮ್ಮ ಸಾಕ್ಷ್ಯದಲ್ಲಿ ಅರ್ಜಿಯಲ್ಲಿ ಹೇಳಲಾದ

ವಿಷಯಗಳನ್ನು ಪುನರಾವರ್ತಿಸಿರುತ್ತಾರೆ. ಆದ್ದರಿಂದ ಸದರಿ ವಿಷಯಗಳನ್ನು ಮತ್ತೊಮ್ಮೆ ಚರ್ಚಿಸುವುದು ಅವಶ್ಯವಿರುವುದಿಲ್ಲ, ಅಸಾ–1 ತಮ್ಮ ಮೌಖಿಕ ಸಾಕ್ಷ್ಯದ ಜೊತೆ ನಿಪಿ–1 ಅಲಭ್ಯ ಪ್ರಮಾಣ ಪತ್ರ, ನಿಪಿ–2 ವಂಶವೃಕ್ಷದ ಪ್ರಮಾಣ ಪತ್ರ, ನಿಪಿ–3 ಆಧಾರ್ ಕಾರ್ಡ್ ನ ಪ್ರತಿ ಮತ್ತು ನಿಪಿ–4 ಪತ್ರಿಕಾ ಪ್ರಕಟಣೆಯನ್ನು ಹಾಜರುಪಡಿಸಿರುತ್ತಾರೆ.

**9.** ಕಡತದಲ್ಲಿ ಲಭ್ಯವಿದ್ದ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಶ್ರೀಮತಿ.ಕಾಳಮ್ಮ ಕೋಂ ಲೇಟ್ ದೇವಶೆಟ್ಟಿ ಇವರು ದಿನಾಂಕಃ 15.06.2017 ರಂದು ಮರಣ ಹೊಂದಿದ್ದು, ಸದರಿಯವರ ಮರಣ ದಿನಾಂಕ ಎದುರುದಾರರ ನೋಂದಣಿ ವಹಿಯಲ್ಲಿ ನೋಂದಣಿಯಾಗಿರುವುದಿಲ್ಲ.

**10.** ಈ ಪ್ರಕರಣದಲ್ಲಿ ನೋಟಿಸ್ ಜಾರಿಯಾದರೂ ಸಹಿತ ಎದುರುದಾರರು ಯಾವುದೇ ತಕರಾರು ವಗೈರೆ ಸಲ್ಲಿಸಿರುವುದಿಲ್ಲ. ಅಷ್ಟೆ ಅಲ್ಲದೆ ಈ ಅರ್ಜಿಯ ವಿಷಯವಾಗಿ ತಕರಾರು ಏನಾದರೂ ಇದ್ದರೆ ಸಲ್ಲಿಸುವ ಸಲುವಾಗಿ ನಿಪಿ–4 ರಂತೆ ಪತ್ರಿಕಾ ಪ್ರಕಟಣೆ ಹೊರಡಿಸಿದ್ದರೂ ಕೂಡ ಯಾರು ತಕರಾರು ಸಲ್ಲಿಸಿರುವುದಿಲ್ಲ. ಆದ್ದರಿಂದ ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಉಲ್ಲೇಖಿಸಿದ ವಿಷಯಗಳು ಹಾಗು ಅ.ಸಾ–1 ರವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ ವಿಷಯಗಳನ್ನು ನಿರಾಕರಿಸುವ ಯಾವುದೇ ವ್ಯತಿರಿಕ್ತವಾದ ಸಾಕ್ಷ್ಯಗಳು ಇರುವುದಿಲ್ಲ ಮತ್ತು ಯಾವುದೇ ತಕರಾರು ಇಲ್ಲದಿರುವುದರಿಂದ ಅರ್ಜಿದಾರರ ವಾದವನ್ನು ಅಲ್ಲಗಳೆಯಲು ಯಾವುದೇ ಸಾಕ್ಷ್ಯಾಧಾರ ಇರುವುದಿಲ್ಲ. ಅಷ್ಟೆ ಅಲ್ಲದೆ ಅರ್ಜಿದಾರರು ಈ ಪ್ರಕರಣಕ್ಕೆ ಬೇಕಾಗುವಷ್ಟು ಸಾಕ್ಷ್ಯವನ್ನು ಒದಗಿಸಿರುವುದರಿಂದ ಅಂಶ–1 ನ್ನು **ಸಕಾರಾತ್ಮಕವಾಗಿ** ಉತ್ತರಿಸಲಾಯಿತು.

11. **ಅಂಶ-2:-** ಅಂಶ-1 ರಲ್ಲಿ ಚರ್ಚಿಸಲಾದ ವಿಷಯಗಳ ಆಧಾರದ ಮೇಲೆ ಈ ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸುತ್ತದೆ:-

**ಆದೇಶ**

ಅರ್ಜಿದಾರರು ಜನನ ಮತ್ತು ಮರಣ ನೊಂದಣಿ ಅಧಿನಿಯಮ 1969 ರ ಕಲಂ 13 ರಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಶ್ರೀಮತಿ.ಕಾಳಮ್ಮ ಕೋಂ ಲೇಟ್ ದೇವಶೆಟ್ಟಿ ಇವರು ದಿನಾಂಕಃ 15.06.2017 ರಂದು, ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಚಿಕ್ಕಯ್ಯನಛತ್ರ ಹೋಬಳಿ, ಅಹಲ್ಯಾ ಗ್ರಾಮದಲ್ಲಿರುವ ನಿವಾಸದಲ್ಲಿ ಮರಣ ಹೊಂದಿದ್ದು, ಸದರಿಯವರ ಮರಣದ ವಿವರವನ್ನು ಎದುರುದಾರರು ತಮ್ಮ ನೋಂದಣಿ ವಹಿಯಲ್ಲಿ ನೋಂದಣಿ ಮಾಡಿ, ಸೂಕ್ತ ಶುಲ್ಕ ಇತ್ಯಾದಿಗಳನ್ನು ಪಡೆದುಕೊಂಡು ಆ ನಂತರ ಪ್ರಮಾಣ ಪತ್ರ ನೀಡತಕ್ಕದ್ದು.

(ಸತೀಶ ಕೆ.ಜಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ನಂಜನಗೂಡು.